ಶ್ರೀ ಟಿ. ಚನ್ನಯ್ಯ.—ಪ್ರಜಾನಕರ್ಕಾರ.

ಶ್ರೀ ಎಸ್. ಸಿದ್ದಪ್ಪ.—ಈ ಅಕ್ವೀಜಿಷ್ಷ್ ಪ್ರೊಪೀಡಿಂಗ್ಸ್‌ನಲ್ಲಿ ಹೊಸ ಪದ್ಧತಿ, ಹಳೆ ಪದ್ಧತಿ ಎಂದು ಬೇರೆ ಇದೆಯೇನು ?

ಶ್ರೀ ಟಿ. ಚನ್ನಯ್ಯ.—ತಾವು ಹಾಗೆ ಕೇಳತಕ್ಕ ಆ ಹೊಸ ಪದ್ಧತಿ ಯಾವುದೋ, ಹಳೆ ಪದ್ಧತಿ ಯಾವುದೋ ನನಗೆ ಗೊತ್ತಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಹಾಗೆ ಯಾವ ಬದಲಾವಣೆಯೂ ಇಲ್ಲದಿದ್ದರೆ ಈ ಅಕ್ವೀಜಿಷ್ಷ್ ಬಗ್ಗೆ ನಿಧಾನ ಬೇಕಾಗುತ್ತಿದೆ ?

ಶ್ರೀ ಟಿ. ಚನ್ನಯ್ಯ.—ಕಾನೂನು ಪ್ರಕಾರ ಈ ಕಾರ್ಯಗಳನ್ನು ಮಾಡಬೇಕಾಗಿರುವುದರಿಂದ ಇವುಗಳು ಸ್ವಲ್ಪ ನಿಧಾನವಾಗಿಯೇ ಆಗುತ್ತವೆ. ಆದಾಗ್ಯೂ ಈಚೆಗೆ ಎಲ್ಲವೂ ಬೇಗ ಬೇಗನೆ ಆಗುತ್ತಿವೆ.

ಶ್ರೀ ಎಸ್. ಸಿದ್ದಪ್ಪ. ಈಗ ಸುಮಾರು ನಮ್ಮ ತಾಲ್ಲೂಕಿನಲ್ಲಿ ಒಂದು ಅಕ್ವೀಜಿಷ್ಷ್ ಕಾರ್ಯ 10-15 ವರ್ಷಗಳಿಂದಲೂ ನಡೆಯುತ್ತಿದೆ. ಆ ಬಗ್ಗೆ ಜಾಗ್ರತೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಅನೇಕ ಸಲ ನಾವು ಆ ವಿಚಾರವನ್ನು ಸರ್ಕಾರದವರ ಗಮನಕ್ಕೆ ತಂದಿರಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅದೇ ರೀತಿ ನಾವೂ ಮಾಡಿ ಕೊಟ್ಟಿದ್ದೇವೆ. ನಮ್ಮಿಂದಲೇನೂ ನಿಧಾನವಾಗಿಲ್ಲ. ಆದರೆ ಆ ಅಕ್ವೀಜಿಷ್ಷ್ ಮೊಬಲಗನ್ನು ಕಟ್ಟಬೆ ಇರುವುದರಿಂದ ಆ ಕೆಲಸ ನಿಧಾನವಾಗಿದೆ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ಈಗ ಈ ಪಟ್ಟಿಯಲ್ಲಿ ಕಂಡ 6 ಗ್ರಾಮಗಳವರು ಆ ಅಕ್ವೀಜಿಷ್ಷ್ ಮೊಬಲಗನ್ನು ಕೊಟ್ಟಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಒಂದು ಗ್ರಾಮದವರು ಮಾತ್ರ ಕೊಟ್ಟಿದ್ದಾರೆ; ಇನ್ನುಳಿದ ಗ್ರಾಮಗಳವರು ಕೊಟ್ಟಿಲ್ಲ ; ಅದಕ್ಕೇ ನಿಧಾನವಾಗುತ್ತಿದೆ.

ಶ್ರೀ ಎಸ್. ಸಿದ್ದಪ್ಪ.—ಇನ್ನು ಈ ವರ್ಷದೊಳಗಾಗಿಯಾದರೂ ಅಲ್ಲಿನ ಪ್ರಜೆಗಳಿಗೆ ಅನುಕೂಲವಾಗುವ ಹಾಗೆ ಸರ್ಕಾರದವರು ಜಾಗ್ರತೆಯಾಗಿ ಈ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅಕ್ವೀಜಿಷ್ಷ್ ಮುಗಿದ ತಕ್ಷಣವೇ ಹಣ ಕಟ್ಟಿದರೆ, ಅದು ತಕ್ಷಣವೇ ಆಗುತ್ತದೆ. ಆ ಜಮೀನನ್ನು ಆ ಕೂಡಲೆ ಅವರ ವಶಕ್ಕೆ ಕೊಡಲಾಗುವುದು.

Road from Bukkambudi to Bhadravati.

Q.—85. **Sri B. MADHAVACHAR** (Bhadravati).—

Will the Government be pleased to state :—

(*a*) whether they are aware that Bukkambudi needs a road to Bhadravati for improving the trade ;

(*b*) whether it is a fact that an estimate has been prepared for forming a road from Bhadravati to Ajjampura *via* Bukkambudi ?

A.—**Sri Kadidal MANJAPPA** (Minister for Revenue and Public Works).—

(*a*) There is already a road connecting the two places.

(*b*) No.

Sri B. MADHAVACHAR.—Are the Government aware that Bukkambudi is a place where areca is grown extensively ?

Sri Kadidal MANJAPPA.—Yes.

Sri B. MADHAVACHAR.—Are the Government aware that the road now existing between Bhadravati and Bukkambudi is only a forest road and carts and lorries cannot move in that road ?

Sri Kadidal MANJAPPA.—Of even that I am aware.

Sri B. MADHAVACHAR.—So in the light of these circumstances, will the Government take up the question of including that road at least in the Second Five Year Plan ?

Sri Kadidal MANJAPPA.—We will consider that.

ಶ್ರೀ ಟಿ. ಸಿ. ಬಸಪ್ಪ.—ಇದರಬಗ್ಗೆ ಮೊದಲೇನಾದರೂ ಒಂದು ಅಂದಾಜು ತಯಾರಾಗಿತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ಮೂವತ್ತು ಸಾವಿರಕ್ಕೆ ಒಂದು ಅಂದಾಜು ಆಗಿತ್ತು.

ಶ್ರೀ ಟಿ. ಸಿ. ಬಸಪ್ಪ.—ಇದರ ಬಗ್ಗೆ ಅಂದಾಜು ತಯಾರಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ತಯಾರಾಗಿದೆ ; ಮೂರುಲಕ್ಷ ರೂಪಾಯಿಗಳಿಗೆ ತಯಾರಾಗಿದೆ.

Lands acquired for forming roads in the Kolar District during distress period.

Q.—293. **Sri B. V. NARAYANA REDDY** (Bagepalli-Gudibanda).—

Will the Government be pleased to state :—

(*a*) the mileage of roads made during the distress period in Kolar District ;

(*b*) the number of acreage of land taken from private owners to make the roads ;

(*c*) whether any compensation has been given to the private owners and if not, whether there is any proposal to give them compensation ?

A.—Sri Kadidal MANJAPPA (Minister for Revenue and Public Works).—

(*a*) 1,085 miles and 5 furlongs.

(*b*) No lands were acquired. But roads were formed taking possession of lands wherever required with the free and voluntary consent of the owners thereof.

(*c*) No.

Sri B. V. NARAYANA REDDY.—My question is "(*b*) the number of acreage of land taken from private owners to make the roads" and your answer is (*b*) "No lands were acquired. But roads were formed taking possession of lands wherever required with the free and voluntary consent of the owners thereof." ಇದು ಕುಂಬಳಕಾಯಿ ಕಳ್ಳನ ಸಮಾಚಾರದ ಹಾಗಾಗಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.— ಇಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ನಾನು ಕೇಳಿರುವುದು ಎಷ್ಟು ಎಕರೆ ತೆಗೆದುಕೊಂಡಿದ್ದೀರಿ ಎಂದು, ಆದರೆ ನಿಮ್ಮ ಉತ್ತರ ಇದಕ್ಕಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನೀವು ಎಷ್ಟು ಎಕರೆ ತೆಗೆದುಕೊಂಡಿದ್ದೀರೆಂದು ಕೇಳಿದ್ದೀರಿ, ಅದಕ್ಕೆ ತೆಗೆದು ಕೊಂಡಿಲ್ಲ ಎಂದು ಉತ್ತರವಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ತೆಗೆದುಕೊಂಡಿದ್ದೀರಿ. . . .

ಶ್ರೀ ಕಡಿದಾಳ್ ಮಂಜಪ್ಪ.—ನಾವಾಗಿ ತೆಗೆದು ಕೊಂಡಿಲ್ಲ; ಗ್ರಾಮಸ್ಥರು ನಮ್ಮ ಗ್ರಾಮಕ್ಕೆ ರಸ್ತೆ ಆಗಬೇಕೆಂದು ತಾವಾಗಿಯೇ ಮುಂದೆ ಬಂದು ಜಮೀನು ಕೊಟ್ಟಿದ್ದಾರೆ. ಆ ಜಮೀನಿನ ಮೇಲೆ ರಸ್ತೆ ಮಾಡಿದ್ದಾರೆ. ಅದು ಅವರ ಜವಾಬ್ದಾರಿ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅವರಾಗಿಯೇ ಕೊಟ್ಟಿದ್ದಾರೆಂಬುದಕ್ಕೆ ದಾಖಲೆ ಇದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಒಪ್ಪಿ ಕೊಂಡದ್ದೇ ದಾಖಲೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅಲ್ಲಿಗೆ, ನೀವು ಅವರನ್ನು ಹೆದರಿಸಿ trespass ಮಾಡಿಸ್ದೀರೆಂದು ಗೊತ್ತಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೋಲಾರ ಜಿಲ್ಲೆ ಮತ್ತು ಇತರ ಕೆಲವು ಜಿಲ್ಲೆಗಳಲ್ಲಿ, 'ನಮ್ಮ ಗ್ರಾಮಕ್ಕೆ ರಸ್ತೆ ಆಗಬೇಕು, ಇದಕ್ಕೆ ಬೇಕಾದ ಜಮೀನನ್ನು ಬಿಟ್ಟು ಕೊಡುತ್ತೇವೆ' ಎಂದು ಅನೇಕ ಜನರು ಮುಂದೆ ಬಂದು ಬಿಟ್ಟುಕೊಟ್ಟರು. ಹೆದರಿಸುವುದು, 'ಟ್ರೆಸ್ ಪಾಸ್' ಇಂಥ ಪ್ರಶ್ನೆಯೇ ಇಲ್ಲ. ನಮ್ಮ ಮಿತ್ರರು ಹಾಗೆ ಮಾಡಿದ್ದಾರೆಂದು ಕಾಣುತ್ತದೆ, ಅದಕ್ಕೆ ಹೇಳುತ್ತಾರೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ತಾವಾಗಿಯೇ ಕೊಟ್ಟರೆಂದು ಹೇಳುತ್ತೀರಿ, ಇದಕ್ಕೇನಾದರೂ documents ಇವೆಯೋ ಅಥವಾ ಬರೀ oral ಅಥವಾ ಬಾಯಿಮಾತೋ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಕಡೆ documents ಇವೆ, ಕೆಲವುಕಡೆ oral. ನಾವು ಈ ರಸ್ತೆ ಕೆಲಸಗಳಿಗೆ ಕೆಲವುಕಡೆ ಧಾನ್ಯ ಸಹಾಯ ಕೊಟ್ಟಿದ್ದೇವೆ ಮತ್ತೆ ಕೆಲವಕ್ಕೆ ಹಣ ಕೊಟ್ಟಿದ್ದೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಮಾಲೀಕರಿಗೆ ಪರಿಹಾರ ಕೊಡದೆ ಜಮೀನು ತೆಗೆದುಕೊಂಡರೆ ಅದು ರಾಜ್ಯಾಂಗಕ್ಕೆ ವಿರೋಧವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಗ್ರಾಮಸ್ಥರೇ ಸರ್ಕಾರದ ಸಹಾಯವನ್ನು ಪಡೆದು ಮಾಡಿಸಿದ್ದಾರೆ, ಸರ್ಕಾರದ ಜವಾಬ್ದಾರಿಯೇನೂ ಇಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ನೀವು ಪರಿಹಾರ ಕೊಟ್ಟಿಲ್ಲವಾದ್ದರಿಂದ, ಅವನವನ ಜಮೀನಿನಲ್ಲಿ ಬೆಳೆ ಬೆಳೆದುಕೊಳ್ಳುವುದಕ್ಕೆ ಆಕ್ಷೇಪಣೆಯುಂಟೆ ?

ಶ್ರೀ ಕಡಿದಾಳ್ ಮಂಜಪ್ಪ.—ಗ್ರಾಮಸ್ಥರು ಬಿಡುತ್ತಾರೆಯೆ ?

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಕೋರ್ಟಿನಲ್ಲಿ ಸಿವಿಲ್ ಸೂಟ್ ಹಾಕಬಹುದು !

(ಉತ್ತರವಿಲ್ಲ)

ಶ್ರೀ ಜಿ ನಾರಾಯಣಗೌಡ.—1,085 ಮೈಲಿ ರಸ್ತೆಯಾಗಿದೆಯೆಂದು ಹೇಳಲಾಗಿದೆ, ಇದನ್ನು ಯಾರು maintain ಮಾಡುತ್ತಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವುಕಡೆ ಅವರೇ ಮಾಡುತ್ತಿದ್ದಾರೆ.

Mr. SPEAKER.—I would like to bring to the notice of the Hon'ble Members that the question is about acquisition and compensation. It is not about maintenance. So it does not arise.

Nandi Hill Road, Chikballapur Taluk.

Q.—530. Sri A. MUNIYAPPA (Sidlaghatta--Chikballapur—Scheduled Castes).—

Will the Government be pleased to state :—

(*a*) the total amount spent on Nandi Hill Road, Chikballapur Taluk, during 1952-53 and 1953-54 ;

(*b*) whether the stones used for the parapet wall constructed by the side of this road are old or new; the lead charges paid and the rate per yard ?

A.—Sri Kadidal MANJAPPA (Minister for Revenue and Public Works).—

(*a*) Rs. 1,60,403.

(*b*) Both old and new stones have been used ; rates are as below :—

		Old stones
Lead charges	...	Re. 0 12 0
Rate per C. Yd.	...	Rs. 2 4 0
		New stones
Lead charges	...	...
Rate per C. Yd.	...	Rs. 5

(inclusive rate.)